# ಆಚಾರ್ಯ ಪರಂಪರೆಯ ಚಿನ್ನದ ಹೂ!

ಮೈಸೂರಿನ ಮಣ್ಣಿನಲ್ಲಿ ಅರಳಿ ಭಾರತೀಯ ಚಿತ್ರಕಲಾ ಪರಂಪರೆಗೆ ಗಣನೀಯ ಕೊಡುಗೆ ನೀಡಿದ ಕಲಾವಿದರಲ್ಲಿ ಎಂ.ಟಿ.ವಿ. ಆಚಾರ್ಯ (1920–1992) ಪ್ರಮುಖರು. ಆಚಾರ್ಯ ಎನ್ನುವ ಹೆಸರು, ಚಿತ್ರಕಲೆಯಲ್ಲಿ ಅವರು ಸಾಧಿಸಿದ ಪರಿಣತಿ, ಸಿದ್ಧಿಯ ಸಂಕೇತವೂ ಹೌದು.

ಯಾಂತ್ರಿಕ ಬುದ್ಧಿಮತ್ತೆಯ ಕಬಂಧಬಾಹುಗಳು ಕಲಾಕ್ಷೇತ್ರವನ್ನೂ ಆವರಿಸಿಕೊಂಡು, ಕಲಾವಿದರ ಕೈಗಳು ಕುಂಚದ ಬದಲು ಡಿಜಿಟಲ್ ಸಲಕರಣೆಗಳನ್ನು ಅವಲಂಬಿಸಿರುವ ಸಂದರ್ಭದಲ್ಲಿ ಬೆಂಗಳೂರಿನ 'ಪ್ರಿಸಂ ಬುಕ್ಸ್' ಪ್ರಕಾಶನ ಸಂಸ್ಥೆ ಎಂಟಿವಿ ಆಚಾರ್ಯರ ಪ್ರತಿಭಾವಿಲಾಸವನ್ನು ಪರಿಚಯಿಸುವ ಕಾಫಿ ಟೇಬಲ್ ಪುಸ್ತಕವನ್ನು ಪ್ರಕಟಿಸಿದೆ. ಕನ್ನಡ ನಾಡಿನ ಹೆಮ್ಮೆಯ ಕಲಾವಿದನನ್ನು ಅವರ ವರ್ಣಚಿತ್ರಗಳ ಮೂಲಕವೇ ಪರಿಚಯಿಸಿಕೊಳ್ಳಲು ಅನುಕೂಲವಾಗುವಂತೆ 'ದಿ ಡಿವೈನ್ ಆರ್ಟ್ ಆಫ್ ಎಂ.ಟಿ.ವಿ. ಆಚಾರ್ಯ' ಕೃತಿ ರೂಪುಗೊಂಡಿದೆ.

ಕಲೆ: ಎಂ.ಟಿ.ವಿ. ಆಚಾರ್ಯ



ಈ ಕೃತಿ ಮೂರು ಭಾಗಗಳಲ್ಲಿದೆ. ಆಚಾರ್ಯರ ದೈವಿಕ ಕಲಾಕೃತಿಗಳು ಹಾಗೂ ಅವುಗಳಿಗೆ ಪೂರಕವಾಗಿ ಶ್ರೀಧರ ತುಮರಿ ಅವರು ಬರೆದಿರುವ ಟಿಪ್ಪಣಿಗಳು ಮೊದಲ ಭಾಗದಲ್ಲಿವೆ. ಆಚಾರ್ಯರ ಕುಂಚಗಾರುಡಿಯಲ್ಲಿ ಮೂಡಿದ ಪುರಾಣಪಾತ್ರಗಳ ಹಿನ್ನೆಲೆಯನ್ನು ಶ್ರೀಧರ ತುಮರಿಯವರು ಅಡಕವಾಗಿ ಕಟ್ಟಿಕೊಟ್ಟಿದ್ದಾರೆ.

ಕೃತಿಯ ನಿರೂಪಣೆ ಇಂಗ್ಲಿಷ್‌ನಲ್ಲಿದ್ದರೂ, ಇದು ಓದಬಹುದಾದ ಹಾಗೂ ನೋಡಬಹುದಾದ ಕೃತಿಯಾದುದರಿಂದ, ಭಾಷೆಯನ್ನು ಹೊರತು ಪಡಿಸಿಯೂ ಕಲಾಕೃತಿಗಳ ಮೂಲಕವೇ ಅನುಭವಿಸಬಹುದಾದ ಸಂಕಲನವಿದು. ನೋಡುತ್ತಾ ನೋಡುತ್ತಾ ಬಣ್ಣಗಳ ಲೋಕದಲ್ಲಿ ಕಳೆದು ಹೋಗಬಹುದಾದ ಕೃತಿಯಿದು. ಭಾವ–ಬಣ್ಣಗಳೊಂದಿಗಿನ ಈ ಮುಖಾಮುಖಿ, ನೆನಪಿನ ಪುಟಗಳನ್ನು ನೇವರಿಸುವ ಅನುಭವವೂ ಹೌದು. ಆಚಾರ್ಯರು ಸೃಷ್ಟಿಸಿರುವ ಪುರಾಣ ಪಾತ್ರಗಳ ಚಿತ್ರಗಳು ಅದೆಷ್ಟು ಮೋಹಕವಾಗಿವೆಯೆಂದರೆ, ಎಳೆಯರು ಈ ಚಿತ್ರಗಳಿಗೆ ಮರುಳಾಗಿಯೇ ವಿಸ್ತೃತ

